Bridge or Causeway near Gottalagunte and Chimmakalahally

687. Sri V. KRISHNA RAO (Gowribidanur).—

Will the Minister for Public Works and Electricity be pleased to state :—

(*a*) whether it has come to the notice of the Government that in Paresandra-Gowribidanur Road, traffic has to be suspended for many days during rainy season in the absence of a bridge or causeway near Gottalagunte and Chimmakalahally ;

(*b*) if so, the action taken to construct a bridge or causeway there ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) This will be examined, subject to availability of funds.

ಶ್ರೀ ವಿ. ಕೃಷ್ಣರಾವ್.—ಈ ರಸ್ತೆಯಲ್ಲಿ ಮುಖ್ಯವಾಗಿ ಎರಡು ಪೋರಿಗಳಾಗಬೇಕಾಗಿದೆ. ಇವು ಆಗದಿರು ವುದರಿಂದ ಮಳೆಗಾಲದಲ್ಲಿ ತಾಲ್ಲೂಕ್‌ನಿಂದ ತಾಲ್ಲೂಕ್‌ಗೆ ಹೋಗಲು ಪ್ರಯಾಣಿಕರಿಗೆ ಅನೇಕ ಸಲ ತೊಂದರೆಯಾಗಿ ದಾರಿ ಮಧ್ಯದಲ್ಲಿಯೇ ಪ್ರಯಾಣಿಕರು ನಿಂತ್ರೆ ಹೋಗುತ್ತಿರುವುದು ಮತ್ತು ಊಟ ಇಲ್ಲದೆ ತೊಂದರೆ ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಗೊಟ್ಟಲಗುಂಟೆ ಮತ್ತು ಚಿಮ್ಮಕಲಹಳ್ಳಿಯ ಬಳಿ ಸೇತುವೆ ಅಥವಾ ಒಡ್ಡುದಾರಿಯಿಲ್ಲದಿರುವುದು ಮತ್ತು ಅದರಿಂದ ಪ್ರಯಾಣಿಕರಿಗೆ ಅನಾನುಕೂಲ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ವಿ. ಕೃಷ್ಣರಾವ್.—ಈಗ ಸರ್ಕಾರದವರು ಅನೇಕ ಹಳ್ಳಿಯ ರಸ್ತೆಗಳ ರಿಪೇರಿ ಕೆಲಸ ಮಾಡಿಸುತ್ತಿರುವುದರಿಂದ, ಈ ಎರಡು ತಾಲ್ಲೂಕ್‌ಗಳ ಮಧ್ಯೆ ಇರುವ ಒಡ್ಡುದಾರಿಯನ್ನು ಸಹ ಏತಕ್ಕೆ ಮಾಡಿಸಬಾರದು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದುವರೆಗೆ ಬ್ಯಾನ್ ಆರ್ಡರ್ ಇದ್ದಿದ್ದರಿಂದ ಮಾಡಿರು ವುದಕ್ಕಾಗಲಿಲ್ಲ ಇನ್ನು ಮುಂದೆ ಇವೆರಡು ಹಳ್ಳಿಗಳ ರಸ್ತೆಗಳಿಗೆ ಪೋರಿ ಕಟ್ಟಿಸಿಕೊಡಬೇಕಾಗುತ್ತದೆ.

ಶ್ರೀ ವಿ. ಕೃಷ್ಣರಾವ್.—ಎಷ್ಟು ದಿವಸದಲ್ಲಿ ಮಾಡಿಸುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಶೀಘ್ರದಲ್ಲಿಯೇ ಎಲ್ಲ ಕೆಲಸಗಳನ್ನು ಮಾಡಬೇಕು ಎಂದು ಜನರಲ್ ಹುಕುಂ ಇರುವುದರಿಂದ, ಎಷ್ಟು ಶೀಘ್ರದಲ್ಲಿ ಸಾಧ್ಯವೋ ಅಷ್ಟು ಶೀಘ್ರದಲ್ಲಿ ಮಾಡುತ್ತೇವೆ.

ಶ್ರೀ ವಿ. ಕೃಷ್ಣರಾವ್.—ಖಚಿತವಾಗಿ ಇಷ್ಟೇ ದಿವಸದಲ್ಲಿ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿರುವುದೇ ಶೀಘ್ರ ವಾಗಿ ಮಾಡಿಸುತ್ತೇವೆ ಎಂದು ಅರ್ಥ.

ಶ್ರೀ ಕೋಣಂದೂರು ಲಿಂಗಪ್ಪ.—ಶೀಘ್ರವಾಗಿ ಎನ್ನುವುದರ ವೇಗ ಎಷ್ಟು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕೋಣಂದೂರು ಲಿಂಗಪ್ಪನವರ ವೇಗ ಎಷ್ಟು ಇದೆಯೋ ಅದಕ್ಕಿಂತ ಹೆಚ್ಚು ವೇಗದಿಂದ ಹೋಗುತ್ತೇವೆ.

MADAM SPEAKER.—Questions are over.